



ಹೂವು ಬಿಡುವ ವಾಣಿಜ್ಯ ಬೆಳೆ– ಶಂಕರಪುರ ಮಲ್ಲಿಗೆಯ ತೋಟ. ಇಷ್ಟಕ್ಕೇ ನಿಲ್ಲದ ಇವರ ಕೃಷಿ ಚಟುವಟಿಕೆ ಹೈನುಗಾರಿಕೆ, ನರ್ಸರಿಯ ಕಡೆಗೂ ಮುಖ ಮಾಡಿದೆ. ಅಡುಗೆಗೆ ಗೋಬರ್ ಗ್ಯಾಸ್ ಘಟಕವೂ ಸ್ಥಾಪಿತವಾಗಿದೆ.

ಕೃಷಿಕ್ಷೇತ್ರದಲ್ಲಿ ಇವರ ಸಾಧನೆಯ ಹಾದಿಯ ಹಿಂದೆ ದೊಡ್ಡ ಶ್ರಮವಿದೆ. ಬ್ರಹ್ಮಾವರದ ಕೃಷಿ ವಿಜ್ಞಾನ ಕೇಂದ್ರದ ಮೊದಲ ಸಾಂಗತ್ಯದೊಂದಿಗೆ ಮುಂದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ರೈತರ ಕೃಷಿ ಪ್ರವಾಸದ ಅನುಭವ, ಕೃಷಿಮೇಳದ ವೀಕ್ಷಣೆ, ಪ್ರಕಟಗೊಂಡ ಪ್ರಗತಿಪರ ರೈತರ ಪತ್ರಿಕಾ ವರದಿಗಳು ಎಲ್ಲವೂ ನಾಯಕರ ಆಧುನಿಕ ಕೃಷಿ ಅಭಿರುಚಿಗೆ ಇಂಬು ನೀಡಿವೆ. ಅನುಭವಗಳಿಂದ ಹುರಿಗೊಂಡು ಸುಧಾರಿತ ಭತ್ತದ ತಳಿ ನಾಟಿ, ನೀರಿನ ಮಿತ ಬಳಕೆ, ತರಕಾರಿಗೆ ಕಳೆ ಕಾಡದ ರೀತಿಯಲ್ಲಿ ಗಿಡದ ಬುಡವನ್ನು ಬಿಟ್ಟು ಉಳಿದ ಜಾಗವನ್ನು ಮುಚ್ಚುವ ಪ್ಲಾಸ್ಟಿಕ್ ಹೊದಿಕೆಯ ಮರ್ಮ ಇತ್ಯಾದಿ ಅರಿತುಕೊಂಡಿದ್ದಾರೆ. ರೋಗ, ಕೀಟಗಳ ನಿರ್ವಹಣೆಯ ಜೊತೆಗೆ ಕೀಟಬಾಧೆಗೆ ತಾವೇ ತಯಾರಿಸಿದ ಸಾವಯವ ಕೀಟನಾಶಕವನ್ನು ಬಳಸತೊಡಗಿದ್ದಾರೆ. ಹಟ್ಟಿಗೊಬ್ಬರ ಮತ್ತು ಕೃಷಿತ್ಯಾಜ್ಯದಿಂದ ತಯಾರಿಸಿದ ಕಾಂಪೋಸ್ಟ್ ಗೊಬ್ಬರವನ್ನು ತರಕಾರಿ ಮತ್ತು ಭತ್ತದ ಬೆಳೆಗೆ ಉಪಯೋಗಿಸುತ್ತಿದ್ದಾರೆ.

ಬೆಳೆದ ಬೆಳೆಗೆ ಮಾರುಕಟ್ಟೆಯನ್ನು ಹುಡುಕಿಕೊಂಡು ಹೋಗುವ ಪ್ರಮೇಯ ಇವರಿಗೆ ಎಂದೂ ಬರಲಿಲ್ಲ. ಹತ್ತಿರದ ಪೇಟೆ ಅಂಗಡಿಗಳು, ಸುತ್ತಮುತ್ತಲಿನ ಊರವರೇ ಇವರ ಖಾಯಂ ಗಿರಾಕಿಗಳು. ಇವರಲ್ಲಿಗೆ ಕೃಷಿ ವೀಕ್ಷಣೆ ಮತ್ತು ಅಧ್ಯಯನಕ್ಕಾಗಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಕೃಷಿ ಇಲಾಖೆಯ ಅಧಿಕಾರಿಗಳು, ಬಯೋಟೆಕ್ನಾಲಜಿ ಕಲಿಯುವ ಕಾಲೇಜು ವಿದ್ಯಾರ್ಥಿಗಳು ಮತ್ತು ಶಾಲಾ ಮಕ್ಕಳೂ ಬರುತ್ತಾರೆ. ಅಕ್ಕಪಕ್ಕದ ಊರವರೂ ಒಮ್ಮೆ ತರಕಾರಿ, ತೋಟ ನೋಡೋಣ ಎಂದು ಬರುವುದುಂಟು. ಒಟ್ಟಿನಲ್ಲಿ ಇವರ ಕೃಷಿ ಇತರರಿಗೆ ಮಾದರಿಯಾಗಿದೆ.

ಬಿ. ಎ. ಪದವಿ ಪಡೆದು ನೌಕರಿಯ ಬೆನ್ನು ಹತ್ತದೆ ಕೃಷಿಯಲ್ಲಿಯೇ ಏಳಿಗೆಯನ್ನು ಕಂಡ ರಾಘವೇಂದ್ರ ನಾಯಕ್ ಈಗ ಕೃಷಿಕ್ಷೇತ್ರದಲ್ಲಿ ರೈತರಿಗೆ ತರಬೇತಿ, ಮಾರ್ಗದರ್ಶನ, ಪ್ರಾತ್ಯಕ್ಷಿಕೆಗಳನ್ನು ನೀಡುತ್ತಿದ್ದಾರೆ. ಕೃಷಿಮೇಳದ ಆಯೋಜನೆ, ಕೃಷಿ ವಿಚಾರ ಸಂಕಿರಣ, ಕೃಷಿ ಅಭಿವೃದ್ಧಿ ಅಧ್ಯಯನ ಪ್ರವಾಸಗಳ ಮೂಲಕ ಕೃಷಿ ಸಂಪನ್ಮೂಲ ವ್ಯಕ್ತಿಯಾಗಿಯೂ ಗುರುತಿಸಿಕೊಂಡಿದ್ದಾರೆ.

ಇವರ ಸಾಧನೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ‘ರಾಜ್ಯ ಮಟ್ಟದ ಶ್ರೇಷ್ಠ ಕೃಷಿಕ’ ಪ್ರಶಸ್ತಿ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಮಟ್ಟದ ಕೃಷಿಮೇಳದಲ್ಲಿ ‘ಸಾವಯವ ಕೃಷಿ ಸಾಧಕ’ ಪ್ರಶಸ್ತಿ, ಕೃಷಿ ಇಲಾಖೆಯ ‘ಆತ್ಮ’ ಯೋಜನೆಯಡಿ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಬೆಂಗಳೂರು ಕೃಷಿ ಕೇಂದ್ರದ ಪ್ರಗತಿಪರ ಯುವ ಕೃಷಿಕ ಪ್ರಶಸ್ತಿಗಳು ಈಗಾಗಲೇ ರಾಘವೇಂದ್ರ ನಾಯಕರ ಮುಡಿಗೇರಿವೆ.

ಪ್ರಸ್ತುತ ಶಿರ್ವ ರೋಟರಿಯಲ್ಲಿ ರೈತ ಮಿತ್ರ ನಿರ್ದೇಶಕರಾಗಿರುವ ಇವರು ಸರಕಾರದ ಗಂಗಾ ಕಲ್ಯಾಣ ಯೋಜನೆಯ ಪ್ರಸಾರಕರಾಗಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರ್ವ–ಸೂಡ ಒಕ್ಕೂಟದ ಅಧ್ಯಕ್ಷರಾಗಿ, ಗ್ರಾಮೀಣಾಭಿವೃದ್ಧಿ ಗುಂಪು, ಕೃಷಿ ಇಲಾಖೆಯ ಅನ್ನಬ್ರಹ್ಮ ರೈತಶಕ್ತಿ ಗುಂಪು–ಗಳಿಗೆ ಮಾರ್ಗದರ್ಶಕರಾಗಿ, ಭೂಚೇತನ ಯೋಜನೆಯಡಿ ಕಾಪು ಕ್ಷೇತ್ರದ ಗೌರವ ಅನುವುಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರಳಜೀವಿ ರಾಘವೇಂದ್ರ ನಾಯಕ್ ಇವರ ಮಾರ್ಗದರ್ಶನ, ನೆರವು ಬಹಳಷ್ಟು ರೈತರ ಬದುಕನ್ನು ಹಸನಾಗಿಸಿದೆ. ಸದಾ ಚಟುವಟಿಕೆಯಲ್ಲಿರುವ ಇವರು ಯಾವುದೇ ಕರೆಗೆ ತಕ್ಷಣ ಓಗೊಡುವ ಮಾದರಿ ರೈತಮಿತ್ರ. (ಸಂಪರ್ಕ ಸಂಖ್ಯೆ 88618–66920).